| ಭಾರತದ ವಿವಿಧ ಆವಾಸ ಸ್ಥಾನಗಳಲ್ಲಿರುವ ಹಕ್ಕಿ ಪ್ರಭೇದಗಳು | |
|---|---|
| ಕಾಡುಗಳು | 344 |
| ಜೌಗು ಭೂಮಿ | 174 |
| ಕಾಡಂಚಿನ ತೋಟಗಳು | 132 |
| ಕುರುಚಲು ಕಾಡು ಪ್ರದೇಶ | 27 |
| ಹುಲ್ಲುಗಾವಲು | 20 |
| ಹಿಮಾಚ್ಛಾದಿತ ಪ್ರದೇಶ | 20 |
| ಯಾವುದೇ ನಿರ್ದಿಷ್ಟ ಸ್ಥಳವಿಲ್ಲದಿರುವ ಪ್ರಭೇದಗಳು | 146 |


ಕರ್ನಾಟಕದಲ್ಲಿ ಗರಿಷ್ಠ ಸಂರಕ್ಷಣಾ ಆದ್ಯತೆ ಅಗತ್ಯವಿರುವ ಹಣ್ಣು ತಿನ್ನುವ ಮಲೆ ಮಂಗಟ್ಟೆ

'ಭಾರತದ ಪಕ್ಷಿಗಳ ಸ್ಥಿತಿ–ಗತಿ 2023' ವರದಿ ಬಿಡುಗಡೆಗೊಂಡಿತು. ಭಾರತದ ಪಕ್ಷಿವೈವಿಧ್ಯದ ಸವಿವರಗಳ ಈ ವರದಿಯನ್ನು ಸರ್ಕಾರಿ ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ಸೇರಿದಂತೆ ಒಟ್ಟು 13 ಸಂಸ್ಥೆಗಳು ಮತ್ತು ಪಕ್ಷಿತಜ್ಞರು ತಯಾರಿಸಿದ್ದಾರೆ. ಬಹುಮುಖ್ಯವಾಗಿ 'ಪೌರ ವಿಜ್ಞಾನ', ಎಂದರೆ ಭಾರತದಲ್ಲಿರುವ 30 ಸಾವಿರಕ್ಕೂ ಹೆಚ್ಚು ಪಕ್ಷಿವೀಕ್ಷಕರು ದಾಖಲಿಸಿದ ಅಂಕಿ–ಅಂಶಗಳನ್ನು ಸಂಗ್ರಹಿಸಿ, ಮಾಹಿತಿ ವಿಶ್ಲೇಷಿಸಿ, ವರದಿ ಸಿದ್ಧಗೊಂಡಿದೆ. ಈ ವರದಿಯನ್ನು ಇ–ಬರ್ಡ್ ಜಾಲತಾಣದಲ್ಲಿ ಲಭ್ಯವಿರುವ ಮೂರು ಕೋಟಿಗೂ ಹೆಚ್ಚು ಪರಿಶೀಲನಾ ಪಟ್ಟಿಗಳ ದತ್ತಾಂಶಗಳನ್ನು ಕ್ರೋಡೀಕರಿಸಿ ತಯಾರಿಸಿದ್ದು, ಇದೊಂದು ಸಾರ್ವಜನಿಕ ಸಹಭಾಗಿತ್ವದ ಅಮೋಘ ದಾಖಲೆಯಾಗಿದೆ.

### 'ಭಾರತದ ಪಕ್ಷಿ ಸ್ಥಿತಿ-ಗತಿ' ವರದಿ ಹೇಳುತ್ತಿರುವುದೇನು?

1. ಭಾರತದಲ್ಲಿ ಈ ವರ್ಷ ದಾಖಲಾಗಿರುವ ಒಟ್ಟು ಪಕ್ಷಿ ಪ್ರಭೇದಗಳ ಸಂಖ್ಯೆ 942.
2. ಕಳೆದ ದಶಕದಲ್ಲಿ ಶೇ. 39ರಷ್ಟು ಹಕ್ಕಿ ಪ್ರಭೇದಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.
3. ಕಳೆದ ಎಂಟು ವರ್ಷಗಳಲ್ಲಿ ಸ್ಥಿರ ಸಂಖ್ಯೆಯಲ್ಲಿದ್ದು, ಏರಿಕೆ ಹಾದಿಯಲ್ಲಿರುವ ಪ್ರಭೇದಗಳು 217.
4. ಕಳೆದ ಮೂರು ದಶಕಗಳಲ್ಲಿ ಸಂಖ್ಯೆಯಲ್ಲಿ ಇಳಿಮುಖವಾಗಿರುವ ಪ್ರಭೇದಗಳು 204.
5. ಗರಿಷ್ಠ ಸಂರಕ್ಷಣಾ ಆದ್ಯತೆ ಅಗತ್ಯವಿರುವ ಪಕ್ಷಿ ಪ್ರಭೇದಗಳ ಸಂಖ್ಯೆ 178.
6. ಗಣನೀಯವಾಗಿ ಸಂಖ್ಯೆಯಲ್ಲಿ ಕಡಿಮೆಯಾಗಿದ್ದು, 'ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ನೇಚರ್ ಕನ್ಸರ್‌ವೇಷನ್ ಸಂಸ್ಥೆ' (IUCN)Y ಕೆಂಪು ಪಟ್ಟಿಗೆ ಸೇರಿಸಲು ಅರ್ಹವಾಗಿರುವ ಪ್ರಭೇದಗಳ ಸಂಖ್ಯೆ 14. ಇದರಲ್ಲಿ ಕರ್ನಾಟಕದ ರಾಜ್ಯ ಪಕ್ಷಿಯಾಗಿ ಗುರುತಿಸಿಕೊಂಡಿರುವ ನೀಲಕಂಠ ಕೂಡ ಸೇರಿದೆ.
7. ಹದ್ದುಗಳು, ವಲಸೆ ಬರುವ ಗೊರವ ಮತ್ತು ಬಾತುಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಳವಳಕಾರಿ ಅಂಶ.
8. ಕಡಲತೀರ, ನದಿಪಾತ್ರ, ಮುಕ್ತ ಆವಾಸ, ಬಯಲು ಮತ್ತು ಹುಲ್ಲುಗಾವಲುಗಳಲ್ಲಿ ಕಂಡುಬರುವ ಪಕ್ಷಿಗಳ ಸಂಖ್ಯೆ ಕ್ಷೀಣಿಸಿದೆ.
9. ಕಳೆದ ಮೂರು ದಶಕಗಳಲ್ಲಿ ಕೋಗಿಲೆಯ

